## ಅಲಿಯಾ ಮೇಲೆ ರಣಬೀರ್ ಒಲವು

'ಯೇ ಜವಾನಿ ಹೇ ದೀವಾನಿ' ಚಿತ್ರದ ಬಳಿಕ ಮಾಜಿ ಪ್ರೇಮಿಗಳಾದ ರಣಬೀರ್ ಕಪೂರ್ ಮತ್ತು ದೀಪಿಕಾ ಪಡುಕೋಣೆ ಮತ್ತೆ ತೆರೆ ಹಂಚಿಕೊಳ್ಳುತ್ತಾರೆ ಎಂದು ಹೇಳಲಾಗುತ್ತಿತ್ತು. ಆದರೆ 'ಕತ್ರೀನಾ ಕೈಫ್ ಜೊತೆ ಪ್ರೇಮ ಪ್ರವಾಸಗಳಲ್ಲಿ ಮುಳುಗಿರುವ ರಣಬೀರ್, ಮತ್ತೊಮ್ಮೆ ದೀಪಿಕಾರೊಂದಿಗೆ ನಟಿಸಲು ಇಷ್ಟಪಡುತ್ತಿಲ್ಲ. ಇಬ್ಬರ ನಡುವೆ ಪ್ರೇಮ ಮತ್ತೆ ಚಿಗುರೊಡೆದಿದೆ ಎನ್ನುವ ಗುಲ್ಲೆದ್ದು ಕ್ಯಾಟ್ ಜೊತೆಗಿನ ಪ್ರೇಮ ಸಲ್ಲಾಪಕ್ಕೆ ಎಲ್ಲಿ ಅಡ್ಡಿಯುಂಟಾಗುತ್ತೇನೋ ಎಂದು ಈ ಚಾಕೊಲೆಟ್ ಹೀರೊ ಡಿಪ್ಸ್‌ರಿಂದ ದೂರವೇ ಇರಲು ಬಯಸುತ್ತಿದ್ದಾರೆ' ಎನ್ನುವುದು ಬಿ–ಟೌನ್ ಪಂಡಿತರ ಅಭಿಮತ.

ಇದಕ್ಕೆ ಒಗ್ಗರಣೆ ಹಾಕುವಂತೆ ಇಮ್ತಿಯಾಜ್ ಅಲಿ ನಿರ್ದೇಶನದ ಹೊಸ ಚಿತ್ರಕ್ಕೆ ದೀಪಿಕಾ ಬದಲು ಅಲಿಯಾ ಭಟ್ ಕಡೆ ರಣಬೀರ್ ಒಲವು ತೋರಿಸುತ್ತಿದ್ದಾರೆ. 'ಹೈವೇ' ಚಿತ್ರದ ಮನೋಜ್ಞ ಅಭಿನಯದಿಂದ ಗಮನ ಸೆಳೆದಿರುವ ಅಲಿಯಾ ತಮ್ಮ ಪಾತ್ರಕ್ಕೆ ಸೂಕ್ತ ನ್ಯಾಯ ಸಲ್ಲಿಸುತ್ತಾರೆ ಎನ್ನುವ ನಂಬಿಕೆ ರಣಬೀರ್ ಅವರಲ್ಲಿದೆ. ಹೀಗಾಗಿ ಅಲಿಯಾ ಹೆಸರನ್ನು ನಾಯಕಿ ಸ್ಥಾನಕ್ಕೆ ಸೂಚಿಸಿರುವ ರಣಬೀರ್, ಆಕೆ ಪಾತ್ರಕ್ಕೆ ಹೊಂದಿಕೊಳ್ಳುತ್ತಾರೆಯೇ ಎಂದು ಕೇಳಿದ್ದಾರೆ. ಆದರೆ ಆ ಪಾತ್ರಕ್ಕೆ ಅಲಿಯಾ ತುಂಬಾ ಚಿಕ್ಕವರಾಗುತ್ತಾರೆ ಎಂದಿದ್ದಾರೆ ಇಮ್ತಿಯಾಜ್. ಹೀಗಾಗಿ ರಣಬೀರ್ ಅವರ ಒತ್ತಾಸೆಯಂತೆ ಅಲಿಯಾ ಈ ಚಿತ್ರದಲ್ಲಿ ಅವರಿಗೆ ಜೋಡಿಯಾಗುವುದು ಅನುಮಾನ. ಪಟ್ಟು ಹಿಡಿದ ರಣಬೀರ್, ಅಲಿಯಾರನ್ನೇ ಕರೆಸಿಕೊಳ್ಳುತ್ತಾರೆ ಎಂಬ ವದಂತಿಯೂ ಇದೆ. ದೀಪಿಕಾ ಜೊತೆ 'ಲವ್ ಆಜ್ ಕಲ್' ಚಿತ್ರ ಮಾಡಿರುವ ಇಮ್ತಿಯಾಜ್ ಅಲಿಗೆ ರಣಬೀರ್ ಹಟ ನುಂಗಲಾರದ ತುತ್ತಾಗಿದೆ. ಆದರೆ ನಾಯಕ ನಟನ ಅಪೇಕ್ಷೆಯನ್ನಂತೂ ಅವರು ತಳ್ಳಿಹಾಕುವ ಸ್ಥಿತಿಯಲ್ಲಿಲ್ಲ. ದೀಪಿಕಾರನ್ನೇ ಮನದಲ್ಲಿಟ್ಟುಕೊಂಡು ಪಾತ್ರ ಸೃಷ್ಟಿಸಿರುವ ಇಮ್ತಿಯಾಜ್ ಮತ್ತೆ ಈ ಜೋಡಿಯನ್ನು ಒಂದುಗೂಡಿಸುವುದರಲ್ಲಿ ಸಫಲರಾಗುತ್ತಾರೋ ಇಲ್ಲವೋ ನೋಡಬೇಕು.





## ಶಾರೂಕ್ ಮೇಲೆ ಕಾಜೋಲ್ ಸಿಟ್ಟು

ಬಾಲಿವುಡ್‌ನಲ್ಲಿ ತೆರೆ ಮೇಲೆ ಅತಿ ಹೆಚ್ಚು ಆಪ್ತವೆನಿಸುವ ಜೋಡಿ ಯಾವುದು ಎಂದರೆ, ಥಟ್ಟನೆ ಹೊರಬೀಳುವ ಉತ್ತರ ಶಾರೂಕ್ ಖಾನ್ ಮತ್ತು ಕಾಜೋಲ್ ಎಂದು. ಗೆಳೆತನವೆಂದರೆ ಅದು ಶಾರೂಕ್–ಕಾಜೋಲ್ ಎನ್ನುವ ಮಟ್ಟಿಗೆ ಸ್ನೇಹಕ್ಕೆ ಉದಾಹರಣೆಯಾದ ಜೋಡಿಯಿದು. ಎಷ್ಟೆಲ್ಲಾ ಜೋಡಿಗಳು ಹುಟ್ಟಿಕೊಂಡು ಮರೆಯಾದರೂ 'ದಿಲ್‌ವಾಲೆ ದುಲ್ಹನಿಯಾ ಲೇ ಜಾಯೆಂಗೇ' ಜೋಡಿಯನ್ನು ಮೀರಿಸಲು ಅವುಗಳಿಂದ ಸಾಧ್ಯವಾಗಿಲ್ಲ. ತೆರೆ ಮೇಲೆ ಮಾತ್ರವಲ್ಲ, ಅದರಾಚೆಗೂ ಇಬ್ಬರ ನಡುವಿನ ಸ್ನೇಹ ಅಷ್ಟೇ ಗಟ್ಟಿಯಾಗಿತ್ತು. 'ಮೈ ನೇಮ್ ಈಸ್ ಖಾನ್' ಚಿತ್ರಕ್ಕೆ ಕಾಜೋಲ್ ಅವರೇ ನಾಯಕಿಯಾಗಬೇಕೆಂದು ಶಾರೂಕ್ ಪಟ್ಟುಹಿಡಿದು ಅವರನ್ನು ಒಪ್ಪಿಸಿ ಕರೆ ತಂದಿದ್ದರು.

ಈಗ ಇಬ್ಬರ ಸ್ನೇಹದ ಮಧ್ಯೆ ಬಿರುಕು ಉಂಟಾಗಿದೆ. 'ಕಾಫಿ ವಿಥ್ ಕರಣ್' ಕಾರ್ಯಕ್ರಮದಲ್ಲಿ ಕಾಜೋಲ್, ಶಾರೂಕ್‌ರಿಗಿಂತಲೂ ರಣಬೀರ್ ಕಪೂರ್ ಉತ್ತಮ ನಟ ಎಂದಿದ್ದಾರೆ. ಇಬ್ಬರಲ್ಲಿ ಯಾರು ಉತ್ತಮ ನಟ ಎನ್ನುವ ಚರ್ಚೆ ಇಲ್ಲಿ ಹುಟ್ಟಿಕೊಂಡಿಲ್ಲ. ಏಕೆಂದರೆ, ಕಾಜೋಲ್ ಉದ್ದೇಶಪೂರ್ವಕವಾಗಿಯೇ ಶಾರೂಕ್ ಮೇಲಿನ ಸಿಟ್ಟಿನಿಂದ ಹೇಳಿದ್ದಾರೆ. ಪರಮಾಪ್ತ ವಲಯದಲ್ಲಿರುವ ಗೆಳೆಯ ಶಾರೂಕ್ ಮೇಲೆ ಕಾಜೋಲ್ ಮುನಿಸಿಗೆ ವರ್ಷವೇ ಉರುಳಿದೆ. ಅದರ ಕೋಪವನ್ನು ಕಾಜೋಲ್ ಈ ವೇದಿಕೆಯಲ್ಲಿ ಹೊರ ಹಾಕಿದ್ದಾರೆ ಅಷ್ಟೇ ಎನ್ನುತ್ತಾರೆ ಬಿ–ಟೌನ್ ಪಂಡಿತರು.

ಶಾರೂಕ್‌ರ 'ಜಬ್ ತಕ್ ಹೈ ಜಾನ್' ಮತ್ತು ಕಾಜೋಲ್ ಪತಿ ಅಜಯ್ ದೇವಗನ್ ಅವರ 'ಸನ್ ಆಫ್ ಸರ್ದಾರ್' ಒಟ್ಟಿಗೆ ಬಿಡುಗಡೆಯಾಗಿದ್ದವು. 'ಜಬ್ ತಕ್ ಹೈ ಜಾನ್' ಒಂದಷ್ಟು ಗಳಿಕೆ ಕಂಡರೆ, ಕಾಜೋಲ್ ಪತಿಯ ಚಿತ್ರ ಸೋತು ಸುಣ್ಣವಾಗಿತ್ತು. ಅಲ್ಲದೆ ಶಾರೂಕ್‌ರ ಚಿತ್ರದ ಪ್ರೀಮಿಯರ್ ಪ್ರದರ್ಶನಕ್ಕೆ ಕಾಜೋಲ್‌ಗೆ ಆಹ್ವಾನವೂ ಬಂದಿರಲಿಲ್ಲ. ಯಶ್‌ರಾಜ್ ಸಂಸ್ಥೆ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದರೂ ಚಿತ್ರ ಬಿಡುಗಡೆಯನ್ನು ಮುಂದೂಡಬೇಕೆಂಬ ಕಾಜೋಲ್ ಮನವಿಗೆ ಅದು ಮಣೆ ಹಾಕಿರಲಿಲ್ಲ. ಅದಕ್ಕೇ ಕೋಪವಂತೆ.

■ ಅಮಿ